

ಮಮತಾ ಅರಸೀಕೆರೆ

# ಜೀವಕ್ಕೆ ಚೇತರಿಕೆ ಕೊಡುವ ಅಭಿವ್ಯಕ್ತಿ



ಅತ್ಯಂತ ಪ್ರಬಲ, ಸಕಾರಾತ್ಮಕ, ಭವ್ಯವಾದ ಗುಣಗಳುಳ್ಳ, ಆಳವಾದ, ಸರಳ ಆನಂದಕ್ಕೆ ಕಾರಣವಾದ ಮನಃಸ್ಥಿತಿಯೊಂದಿದ್ದರೆ ಅದು ಪ್ರೇಮ. ತನ್ನ ಸಹಜ ಕಾಡುವ ಗುಣದೊಂದಿಗೆ ತಾನಾಗೇ ಉದ್ಭವಿಸುವ, ಹೃದಯ, ಭಾವ, ಬುದ್ಧಿಯನ್ನು ಆವರಿಸುವ ಮಹತ್ತರ ಶಕ್ತಿಯಿದ್ದರೆ ಅದು ಪ್ರೀತಿಗೆ. ಪ್ರೇಮಪ್ರೀತಿಯ ಯಾವುದೇ ಬರಹ, ಕಾವ್ಯ, ವಸ್ತು, ಸಂಬಂಧ ನೇರವಾಗಿ ಹೃದಯವನ್ನು ತಟ್ಟಿ ತನ್ನ ಮಾಂತ್ರಿಕ ಸತ್ವದಿಂದ ಪ್ರಭಾವ ಬೀರಿ ಸೆಳೆಯಬಲ್ಲದು. ಅದರ ಸೆಳೆತದಿಂದ ತಪ್ಪಿಸಿಕೊಳ್ಳಲೇ ಅಸಾಧ್ಯ ಎನ್ನುವಂತಹ ಸಾಮರ್ಥ್ಯ ಅದಕ್ಕಿದೆ.

ಅದೇ ಪ್ರೀತಿ ಕಾವ್ಯರೂಪದಲ್ಲಿದ್ದರೆ ಅದರ ಪರಿಣಾಮವನ್ನು ವರ್ಣಿಸಲುಂಟೆ? ಪ್ರೇಮಭಾವ ಕವನದಲ್ಲಿ ಮೂಡಿದರೆ ಆ ಕವನ ಮತ್ತೂ ಶಕ್ತಿಯುತ. ಇದಕ್ಕೆ ಸಾಕ್ಷಿಯಾಗಿ ನಾವು ನೂರಾರು ಕವನಗಳನ್ನ ಓದಿದ್ದೇವೆ. ಮತ್ತು ಆವಾಹಿಸಿಕೊಂಡಿದ್ದೇವೆ, ಮೆಚ್ಚಿದ್ದೇವೆ. ಆ ಪ್ರೇಮಭಾವದಲ್ಲಿ ತಮ್ಮನ್ನು ತಾವು ಊಹಿಸಿಕೊಂಡು ತೇಲಿದವರೆಷ್ಟೋ ಅಲೆಯಲ್ಲಿ ಕೊಚ್ಚಿಹೋದವರೆಷ್ಟೋ. ಕಚಗುಳಿಯಿಡುವ, ಉತ್ಕಟತೆಯಲ್ಲಿ ತೇಲಿಹೋಗುವ ಭಾವತೀತ ಅನುಭವವನ್ನ ಗ್ರಹಿಸದವರಾರು?

ಹೀಗೊಂದು ಸಭೆಯಲ್ಲಿ ಪ್ರಮುಖ ಲೇಖಕ ಹಾಗೂ ಗಂಭೀರ ಚಿಂತಕರೊಬ್ಬರು 'ಇತ್ತೀಚೆಗೆ ನಮ್ಮ ಕವಿಗಳು ಪ್ರೇಮಗೀತೆಗಳನ್ನೇ ಬರೆಯುತ್ತಿಲ್ಲ. ಎಲ್ಲಾ ಕವಿಗೋಷ್ಠಿಗಳಲ್ಲೂ ಘನ ಗಂಭೀರ ಪದ್ಯಗಳನ್ನೇ ಕೇಳುವಂತಾಗಿದೆ. ಪ್ರೇಮಪದ್ಯಗಳನ್ನೂ ಬರೆಯುವಂತವರಾಗಿ' ಅಂದರು. ಅಂದರೆ ವರ್ತಮಾನದ ಸಮಸ್ಯೆಗಳು, ತಲ್ಲಣಗಳು, ತಳಮಳಗಳನ್ನಷ್ಟೇ ಬರೆಯಬೇಕೆಂತಲೂ ಹಾಗಿಲ್ಲವಾದರೆ ತಮ್ಮನ್ನು ಯಾರೂ ಪ್ರಮುಖವಾಗಿ ಪರಿಗಣಿಸುವುದಿಲ್ಲವೆಂತಲೂ ತಮ್ಮ ಮೇಲೆಯೇ ತಾವೇ ಜವಾಬ್ದಾರಿಯೊಂದನ್ನು ಹೇರಿಕೊಂಡು ಆಲೋಚನಾಪರ ಕಾವ್ಯವನ್ನು ಬರೆಯುತ್ತಿದ್ದ ಕವಿಗಳ